**IN THE COURT OF THE SENIOR CIVIL JUDGE AND JMFC, TIPTUR.**

**CC No. 202/2018**

**PW-1**

**Oath is administered to the witness on 21.07.2025**

**Further cross examination by: Sri. T.K.R Counsel for accused**

ನಾನು ನನ್ನ ದೂರಿನಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ದಿಃ 08-09-2017 ರಂದು ಆರೋಪಿಗೆ ನೋಟೀಸನ್ನು ಜಾರಿ ಮಾಡಿರುವುದಾಗಿ ಹೇಳಿದ್ದೇನೆ. ನಿಪಿ-4 ಅಂಚೆ ರಸೀದಿಯಲ್ಲಿ ದಿಃ 08-09-2017 ಎಂದು ಇರುವುದಿಲ್ಲ ಎಂದರೆ ನಿಜ. ಸಾಕ್ಷಿಯ ಅದರಲ್ಲಿ ದಿಃ 09-09-2017 ಎಂದು ಇದೆ ಎಂದು ಹೇಳುತ್ತಾರೆ. ದಿಃ 08-09-2017 ರಂದು ನೋಟೀಸ್ ಕಳುಹಿಸಿರುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಕೊಟ್ಟಿಲ್ಲ ಎಂದರೆ ಸಾಕ್ಷಿಯು ದಿಃ 09-09-2017ರ ಅಂಚೆ ರಸೀದಿಗಳನ್ನು ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ದಿಃ 09-09-2017 ರ ದಿನಾಂಕದ ನೋಟೀಸು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಿಪಿ-5 ಅಂಚೆ ಕಛೇರಿಯ ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿ Date of entry 11.09.2017 ಎಂದು ಮತ್ತು Date of delivery 12.09.2017 ಎಂದು ಬರೆಯಲಾಗಿದೆ ಎಂದರೆ ನಿಜ. ದಿಃ 08-09-2017 ರಂದು ಕೊಟ್ಟಂತಹ ನೋಟೀಸಿನ ಬಗ್ಗೆ ಆರೋಪಿಗೆ ಅಂಚೆ ಮೂಲಕ ಕಳುಹಿಸಿರುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-5 ಅಂಚೆ ಹಿಂಬರಕ್ಕೆ ಸಂಬಂಧಿಸಿದಂತೆ ನಮ್ಮ ವಕೀಲರು ದಿಃ 17-10-2017 ರಂದು ಅಂಚೆ ಕಛೇರಿಗೆ ಬರೆದಿರುವ ಪತ್ರದಲ್ಲಿ ಎಲ್ ಕೃಷ್ಣಮೂರ್ತಿ ಎನ್ನುವವರ ಹೆಸರು ಬರೆದಿದ್ದಾರೆಎಂದರೆ ಸಾಕ್ಷಿಯು ಅದನ್ನು ತಿದ್ದಿ ಶರಣಪ್ಪ ಆರ್.ಸಿ ಎಂದು ಬರೆದಿದ್ದಾರೆ ಎಂದು ಹೇಳುತ್ತಾರೆ. ದಿಃ 08-09-2017 ರಂದು ಕಳುಹಿಸಲಾಗಿದೆ ಎಂದು

ಹೇಳುವ ಲೀಗಲ್ ನೋಟೀಸಿಗಿ ಸಂಬಂಧಪಟ್ಟಂತೆ ನೋಟೀಸು ಜಾರಿಯಾಗಿರುವುದರ ಬಗ್ಗೆ ಸ್ವೀಕೃತಿ ಪತ್ರ ಕೊಡಿ ಎಂದು ವಕೀಲರ ಪತ್ರದಲ್ಲಿ ಬರೆದಿಲ್ಲ.

ನನ್ನ ಸ್ವಂತ ಊರು ಮಣಕಿಕೆರೆ. ನನ್ನ ತಂದೆ ಹಸೆರು ಮರಿಯಪ್ಪ. ಆರೋಪಿಗೆ ಸೇರಿದ ಶ್ರೀ ಮುಕ್ಕಣ್ಣೇಶ್ವರ ಕೋಕನೇಟ್ ಇಂಡಸ್ಟ್ರೀಸ್ ಎನ್ನುವ ಭೈರನಾಯಕನಹಳ್ಳಿ ಗ್ರಾಮದಲ್ಲಿ ಕಾರ್ಖಾನೆ ಇತ್ತು ಎಂದರೆ ನಿಜ. ಅದರಲ್ಲಿ ಅವರು ತೆಂಗಿನ ಕಾಯಿ ಪೌಡರ್ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ನನ್ನ ಊರಿನಿಂದ ತಿಪಟೂರಿಗೆ ಬರಬೇಕೆಂದರೆ ಭೈರನಾಯಕನಹಳ್ಳಿ ಮಾರ್ಗವಾಗಿ ಬರಬೇಕು ಎಂದರೆ ನಿಜ. ಆರೋಪಿಯ ಕಾರ್ಖಾನೆಯು 2014 ರಲ್ಲಿ ಮುಚ್ಚಲಾಗಿತ್ತು ಎಂದರೆ ಗೊತ್ತಿಲ್ಲ. ಆತನಿಗೆ ಅನಾರೋಗ್ಯ ಸಮಸ್ಯೆ ಇದ್ದರಿಂದ ಕಾರ್ಖಾನೆ ಮುಚ್ಚಲಾಗಿತ್ತು ಎಂದರೆ ಗೊತ್ತಿಲ್ಲ. ತಿಪಟೂರಿನ ಎಪಿಎಂಸಿ ಯಾರ್ಡಿನಲ್ಲಿ ನನ್ನ ಕುಟುಂಬಕ್ಕೆ ಸೇರಿದ ಮಹಾಲಕ್ಷ್ಮಿ ಟ್ರೇಡ್ ಲಿಂಗ್ಸ್ ಮಣಕಿಕೆರೆ ಎನ್ನುವ ಕೊಬ್ಬರಿ ಅಂಗಡಿ ಇತ್ತು ಎಂದರೆ ನಿಜ. 2010 ರಲ್ಲಿ ಆ ಅಂಗಡಿ ಇತ್ತು. 2010 ರಲ್ಲಿ ನುಗ್ಗೆಹಳ್ಳಿ ಗ್ರಾಮದ ಅಣ್ಣಯಪ್ಪ ಎನ್ನುವವರು ನನ್ನ ಅಂಗಡಿಗೆ ದಲ್ಲಾಳಿ ವ್ಯಾಪಾರಕ್ಕಾಗಿ ಕೊಬ್ಬರಿ ಮತ್ತು ತೆಂಗಿನಕಾಯಿ ಬಿಡುತ್ತಿದ್ದರು ಎಂದರೆ ನನಗೆ ಈಗ ಅದು ನೆನಪಿರುವುದಿಲ್ಲ. ಆತ ನಮ್ಮ ಅಂಗಡಿಗೆ Regular ಆಗಿ ಆ ರೀತಿ ಕೊಬ್ಬರಿ ಮತ್ತು ತೆಂಗಿನಕಾಯಿಗಳನ್ನು ತಂದು ಹಾಕುತ್ತಿದ್ದನು ಎಂದರೆ ಸರಿಯಲ್ಲ. ಆರೋಪಿಯು ಸಹ ಅವರ ಕಾರ್ಖಾನೆಗೆ ತೆಂಗಿನ ಕಾಯಿ ಖರೀದಿ ಮಾಡಲು ಎಪಿಎಂಸಿ ಯಲ್ಲಿ ಲೈಸೆನ್ಸ್ ಹೊಂದಿದ್ದರು ಎಂದರೆ ಗೊತ್ತಿಲ್ಲ. ಆ ರೀತಿ ಎಪಿಎಂಸಿ ಗೆ ಕೊಬ್ಬರಿ ಖರೀದಿ ಮಾಡಲು ಬರುವ ಸಮಯದಲ್ಲಿಯೇ ಆರೋಪಿ ನನಗೆ ಪರಿಚಯವಾಗಿದ್ದರು ಎಂದರೆ ಸರಿಯಲ್ಲ. ಆರೋಪಿಯು ನನಗೆ ಆ ಸಮಯದಲ್ಲಿ ಕಿಕ್ಕೇರಿ, ಕಾರೇಹಳ್ಳಿ, ಚನ್ನರಾಯಪಟ್ಟಣದಿಂದ ಯಾರಾದರೂ ಕಾಯಿ ತಂದು ಹಾಕುವವರಿದ್ದರೆ ಹೇಳಿ ಎಂದು ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಆರೋಪಿಗೆ ನುಗ್ಗೇಹಳ್ಳಿಯ

ಅಣ್ಣಯ್ಯಪ್ಪ ಎನ್ನುವವರು ಆ ರೀತಿ ಕಾಯಿ ಹಾಕುತ್ತಾರೆ ಅವರಿಗೆ ಪರಿಚಯ ಮಾಡಿಕೊಡುತ್ತೇನೆ ಎಂದು ಹೇಳಿದ್ದ ಎಂದರೆ ಸರಿಯಲ್ಲ. ನಾನು ಆತನಿಗೆ ಸಾಲವಾಗಿ ಹಣ ಕೊಡುತ್ತಿದ್ದೆ ಮತ್ತು ಆತ ನನಗೆ ಕಾಯಿ ಬಿಡುತ್ತಿದ್ದ ಎಂದರೆ ಸರಿಯಲ್ಲ. ಅಣ್ಣಯ್ಯಪ್ಪ ಎನ್ನುವವರು ನನಗೆ 50 ಸಾವಿರ ರೂ. ಹಣ ಕೊಡಬೇಕಿತ್ತು ಎಂದರೆ ಸರಿಯಲ್ಲ. ಸದರಿ ಅಣ್ಣಯ್ಯಪ್ಪ ಆರೋಪಿಗೆ ತೆಂಗಿನ ಕಾಯಿ ಹಾಕುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಅಣ್ಣಯ್ಯಪ್ಪ ಆರೋಪಿಯಿಂದ ಕಾಯಿ ಹಾಕಿದ್ದ ಭದ್ರತೆಗಾಗಿ ಒಂದು ಚೆಕ್ ನ್ನು ಪಡೆದಿದ್ದ ಎಂದರೆ ಸರಿಯಲ್ಲ. ಅದೇ ಚೆಕ್ ನಾನು ನ್ಯಾಯಾಲಯದಲ್ಲಿ ಹಾಕಿದ್ದೇನೆ ಎಂದರೆ ಸಾಕ್ಷಿಯು ನನಗೆ ಕೊಟ್ಟಿದ್ದಂತಹ ಚೆಕ್ ನು ಹಾಕಿದ್ದೇನೆ ಎಂದು ಹೇಳುತ್ತಾರೆ.

ಆರೋಪಿಯು ರೈಲ್ವೆ ಸ್ಟೇಷನ್ ರಸ್ತೆಯಲ್ಲಿರುವ ಎಸ್ ಬಿ ಎಂ ಶಾಖೆಯಲ್ಲಿ ಖಾತೆ ನಂ. 64059954464 ಹೊಂದಿದ್ದರು ಎಂದರೆ ಗೊತ್ತಿಲ್ಲ. 2017 ರಲ್ಲಿ ಸ್ಟೇಷನ್ ರಸ್ತೆಯಲ್ಲಿರುವ ಎಸ್ ಬಿ ಎಂ ಶಾಖೆಯಲ್ಲಿ ಆರೋಪಿಯು ಖಾತೆ ಹೊಂದಿದ್ದರು ಎಂದರೆ ನಿಜ. ಸಾಕ್ಷಿಯು ನನಗೆ ಮಾರನಗೆರೆ ಶಾಖೆಯ ಚೆಕ್ ಕೊಟ್ಟಿದ್ದರು ಎಂದು ಹೇಳುತ್ತಾರೆ. ಆ ಎರಡೂ ಬ್ಯಾಂಕ್ ಗಳು ಮರ್ಜ್ ಆಗುವ ಮೊದಲು ನನಗೆ ಚೆಕ್ ಕೊಟ್ಟಿದ್ದರು ಎಂದು ಹೇಳುತ್ತಾರೆ. ನಿಪಿ-1 ಚೆಕ್ ಆರೋಪಿಯು 2010 ರಲ್ಲಿ ಅಣ್ಣಯ್ಯಪ್ಪನಿಗೆ ಕೊಟ್ಟಂತಹ ಚೆಕ್ ಎಂದರೆ ಆ ಅಣ್ಣಯ್ಯಪ್ಪ ಯಾರು ಎಂದು ನನಗೆ ಗೊತ್ತೇ ಇಲ್ಲ ಎಂದು ಹೇಳುತ್ತಾರೆ. ದಿಃ 12-07-2010 ರಿಂದ ದೀ 31-01-2011 ರವರೆಗೆ ನಿಪಿ-1 ಚೆಕ್ ಅಲ್ಲದೆ ಉಳಿದ ಎಲ್ಲಾ ಚೆಕ್ ಗಳು ನಗದೀಕರಣ ಆಗಿವೆ ಎಂದರೆ ಗೊತ್ತಿಲ್ಲ. ಆರೋಪಿಯು ನನಗೆ ಯಾವುದೇ ಹಣ ಕೊಡುವುದು ಇರಲಿಲ್ಲ ಮತ್ತು ನಾನು ಅಣ್ಣಯ್ಯಪ್ಪ ರವರಿಗೆ ಆರೋಪಿಯು 2010 ರಲ್ಲಿ ಕೊಟ್ಟಂತಹ ಚೆಕ್ ನ್ನು ದುರುಪಯೋಗ ಮಾಡಿಕೊಂಡು ಈ ಪ್ರಕರಣ ದಾಖಲು ಮಾಡಿದ್ದೇನೆ ಎಂರದೆ ಸರಿಯಲ್ಲ. ನಾನು ನಿಪಿ-1 ಚೆಕ್ ಹಾಕಿದಾಗ ಎಸ್ ಬಿ ಎಂ ಶಾಖೆಯವರು ಸದರಿ ಬ್ಯಾಂಕ್ ಎಸ್ ಬಿ ಐ ಗೆ ವಿಲೀನವಾಗಿದೆ ಎಂದು ಚೆಕ್ ನ ಮೇಲೆ ಬರೆದಿದ್ದಾರೆ ಎಂದರೆ

ಸರಿಯಲ್ಲ. ನಿಪಿ-1 ಚೆಕ್ ನ ಮೇಲೆ ವಿಲೀನವಾಗಿದೆ ಎಂದು ಬರೆಯಲಾಗಿದೆ ಎಂದರೆ ನಿಜ. ನನ್ನ ನೋಟೀಸ್ ನಲ್ಲಿ ನಾನು ಆರೋಪಿಗೆ ವಿಲೀನ ಆಗುವ ಮೊದಲಿನ ಚೆಕ್ ಕೊಟ್ಟಿದ್ದೀರಾ ಎಂದು ತಿಳಿಸಿರುವುದಿಲ್ಲ.

2014 ರಲ್ಲಿ ಆರೋಪಿಯು ತನ್ನ ಲೈಸೆನ್ಸ್ ನ್ನು ರದ್ದು ಪಡಿಸುತ್ತಿದ್ದೇನೆ ಯಾರಿಗಾದರೂ ಸಾಲ ಕೊಡಬೇಕಿದ್ದರೆ ಕೇಳಿ ಪಡೆದುಕೊಳ್ಳಿ ಎಂದು ಪತ್ರಿಕಾ ಪ್ರಕಟಣೆ ಮಾಡಿದ್ದರು ಎಂದರೆ ಗೊತ್ತಿಲ್ಲ. ಆರೋಪಿಯ ವಿಳಾಸಕ್ಕೆ ವಕೀಲರ ನೋಟೀಸು ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮಗ ಇಂಜಿನಿಯರ್ ಮತ್ತು ಆತನ ಹೆಂಡತಿ ಸರ್ಕಾರಿ ಆಸ್ಪತ್ರೆಯಲ್ಲಿ ಹೆಡ್ ನರ್ಸ್ ಆಗಿರುವ ಕಾರಣ ಆತ ನನ್ನ ಬಳಿ ಸಾಲ ಕೇಳುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಒಟ್ಟು 2 ರಿಂದ 3 ಕೋಟಿ ಬೆಲೆ ಬಾಳುವ ಆಸ್ತಿಗಳು ಇವೆ ಎಂದರೆ ಗೊತ್ತಿಲ್ಲ.

ಆರೋಪಿಗೆ ನಾನು ನಮ್ಮ ಅಂಗಡಿಯಲ್ಲಿಯೇ ಸಾಲ ಕೊಟ್ಟಿರುತ್ತೇನೆ. ಆ ಹಣ ಕೊಡುವ ಸಮಯದಲ್ಲಿ ನಾನು ಮತ್ತು ಆರೋಪಿ ಇಬ್ಬರೇ ಇದ್ದೆವು. ಒಂದು ವಾರದಲ್ಲಿ ದುಡ್ಡು ಬರುತ್ತದೆ ಎಂದು ಕೊಡುತ್ತೇವೆ ಎಂದು ನನ್ನಿಂದ ಹಣ ಪಡೆದುಕೊಂಡು ಹೋಗಿದ್ದರು. ಆರೋಪಿಯು ನನ್ನ ಅಂಗಡಿಗೆ ಬಂದಿರುವುದಿಲ್ಲ ಮತ್ತು 2 ಲಕ್ಷ ಹಣ ಪಡೆದಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-1 ಚೆಕ್ ದಿಃ 31-02-2017 ರಂದು ಚಾಲ್ತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ವಕೀಲರ ನೋಟೀಸು ಜಾರಿಯಾಗಿರಲಿಲ್ಲ ಮತ್ತು ಆ ರೀತಿ ಜಾರಿಯಾಗಿದ್ದರೆ ಆತ ಅದಕ್ಕೆ ಉತ್ತರ ನೀಡುತ್ತಿದ್ದ ಎಂದರೆ ಸರಿಯಲ್ಲ. ನಿಪಿ-3 ರಿಂದ 5 ರ ದಾಖಲೆಗಳಲ್ಲಿ ಇರುವ ದಿನಾಂಕಗಳಿಗೆ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಆತನ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**CC No.202/2018** **PW-1**

**Re-Examination NIL**

**(R.O.A & I.C.)**

**(Mohamed Arifulla C.F)**
SENIOR CIVIL JUDGE JMFC,
TIPTUR